**<u>ಸಾಕ್ಷಿಗೆ ದಿನಾಂಕ 13.11.2024 ರಂದು ಪ್ರಮಾಣ ವಚನ ಭೋದಿಸಲಾಯಿತು</u>**

**<u>ಪಾಟೀ ಸವಾಲುಃ</u>** ಆರೋಪಿ ಪರ ವಕೀಲರಿಂದ

ನಾನು ಮತ್ತು ಆರೋಪಿಯು ಒಂದೇ ಊರಿನವರು. ಆರೋಪಿಯು ನನಗೆ ಹುಟ್ಟಿನಿಂದಲೂ ಪರಿಚಯ. ಆರೋಪಿ ಮತ್ತು ನನ್ನ ನಡುವೆ ನನ್ನ ತಂದೆಯ ಕಾಲದಿಂದಲೂ ಸಹ ಹಣದ ವ್ಯವಹಾರ ನಡೆಯುತ್ತಿದ್ದು, ಅದಕ್ಕೆ ಸಂಬಂಧಿಸಿದ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನಾನು 6 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಕನ್ನಡ ಓದಲು ಮತ್ತು ಬರೆಯಲು ಸುಮಾರಾಗಿಬರುತ್ತದೆ. ಆಂಗ್ಲ ಭಾಷೆ ಬರುವುದಿಲ್ಲ. ಆರೋಪಿಯು 2016 ರ ಅಕ್ಟೋಬರ್ ತಿಂಗಳಲ್ಲಿ ನನ್ನ ಬಳಿ ಹಣವನ್ನು ನನ್ನ ಮನೆಯಲ್ಲಿ ಕೇಳಿರುತ್ತಾರೆ. ಅದೇ ದಿನ ನಾನು ಆರೋಪಿಗೆ ಹಣವನ್ನು ನೀಡಿರುತ್ತೇನೆ. ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ನನ್ನ ಪಿರ್ಯಾದಿನಲ್ಲಾಗಲೀ, ನೋಟೀಸ್‌ನಲ್ಲಾಗಲೀ ಅಥವಾ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಾಗಲೀ ಆರೋಪಿಯು ಕೇಳಿದ ದಿನವೇ ನಗದು ರೂಪದಲ್ಲಿ ಹಣವನ್ನು ನೀಡಿರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಹಣವನ್ನು ನೀಡಿದ ದಿನದಂದು ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ರೀತಿಯ ಪತ್ರ ವ್ಯವಹಾರ ಆಗಿರುವುದಿಲ್ಲ. ಆರೋಪಿಯು ಕೇಳಿದ ದಿನದಂದು ಯಾವುದೇ ಸಾಕ್ಷಿ ಇಲ್ಲದೇ, ಯಾವುದೇ ಪತ್ರವನ್ನು ಮಾಡಿಕೊಳ್ಳದೇ ಆರೋಪಿಗೆ ನಗದು ರೂ. 3 ಲಕ್ಷ ಹಣವನ್ನು ನೀಡಿರುತ್ತೇನೆ ಎಂದರೆ ಸರಿ. ಆ ದಿನ ನನ್ನ ಬಳಿ ಆರೋಪಿತನಿಗೆ ನೀಡಲು ರೂ. 3 ಲಕ್ಷ ಹಣ ಇತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಜಮೀನು ಮಾರಾಟದ ಕರಾರು ಪತ್ರ ಇರುತ್ತದೆ ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಆರೋಪಿಯ ಜೊತೆ ಆರೋಪಿಯ ಮನೆಯವರು ಹಣವನ್ನು ತೆಗೆದುಕೊಳ್ಳಲು ಬಂದಿರುತ್ತಾರೆ, ಸದರಿ ವಿಷಯವನ್ನು ನನ್ನ ದೂರಿನಲ್ಲಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ರೂ. 3 ಲಕ್ಷ ಹಣವನ್ನು ಯಾವ ಮುಖ ಬೆಲೆಯ ನೋಟುಗಳ ಮೂಲಕ ನೀಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ವಾರ್ಷಿಕ ಆದಾಯವನ್ನು ಎಷ್ಟಿರುತ್ತದೆ ಎಂದು ಹೇಳಲಾಗುವುದಿಲ್ಲ. ನಾನು ವ್ಯವಸಾಯವನ್ನು ಮತ್ತು ವ್ಯಾಪಾರವನ್ನು ಮಾಡುತ್ತೇನೆ. ಅವುಗಳಿಂದ ವಾರ್ಷಿಕ ಎಷ್ಟು ಆದಾಯ ಬರುತ್ತದೆ ಎಂದು ಹೇಳಲಾಗುವುದಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ಆರೋಪಿಗೆ ರೂ. 3 ಲಕ್ಷ ಹಣವನ್ನು ನೀಡಿದ 6 ತಿಂಗಳ ನಂತರ ಹಿಂದಿರುಗಿಸುವುದಾಗಿ ಹೇಳಿರುತ್ತಾರೆ. 6 ತಿಂಗಳ ನಂತರ ಹೋಗಿ ಕೇಳಿಕೊಂಡಿರುತ್ತೇನೆ ಸದರಿ ವಿಷಯವನ್ನು ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಹೋಗಿ ಕೇಳಿಕೊಂಡಿರುತ್ತೇನೆ ಎಂದು ದೂರಿನಲ್ಲಿ ತಿಳಿಸಿರುವುದಿಲ್ಲ.

2017 ರಲ್ಲಿ ನಿಪಿ-1 ನ್ನು ನೀಡಿರುತ್ತಾರೆ. ಆರೋಪಿಯು 2017 ರಲ್ಲಿ ಯಾವುದೇ ರೀತಿಯ ಚೆಕ್ಕನ್ನು ನೀಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನೀಡಿದ ಚೆಕ್ ನಂಬರ್ ಗೊತ್ತಿಲ್ಲ. ಸದರಿ ಚೆಕ್ ಕೆನರಾ ಬ್ಯಾಂಕ್, ಕಂಟನಕುಂಟೆ ಶಾಖೆಗೆ

ಸೇರಿದ್ದಾಗಿರುತ್ತದೆ. ಆರೋಪಿಯು ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಸದರಿ ನಿಪಿ-1 ರಲ್ಲಿ ಕೆನರಾ ಬ್ಯಾಂಕ್, ಕಂಟನಕುಂಟೆ ಶಾಖೆಗೆ ಸೇರಿದ್ದಾಗಿರುವುದಿಲ್ಲ ಅದು ಪಾಲನಜೋಗಹಳ್ಳಿ ಶಾಖೆಗೆ ಸೇರಿದ್ದಾಗಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಪಾಲನಜೋಗಹಳ್ಳಿ ಶಾಖೆಗೆ ಸೇರಿದ್ದಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿರುವ ಬರವಣಿಗೆಗೂ ಹಾಗೂ ಸಹಿಯಲ್ಲಿ ವ್ಯತ್ಯಾಸವಿರುತ್ತದೆ ಎಂದರೆ ಆರೋಪಿಯೇ ಬರೆದು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-3 ನ್ನು ಯಾವ ದಿನಾಂಕದಂದು ನೀಡಿರುತ್ತೇನೆ ಎಂದು ನೆನಪಿಲ್ಲ. ಸದರಿ ನೋಟೀಸ್‌ನ್ನು ನಾವು ವಾಸಿಸುತ್ತಿರುವ ಊರಿನ ವಿಳಾಸಕ್ಕೆ ನೀಡಿರುತ್ತೇವೆ. ಆರೋಪಿಯು ಅದೇ ಊರಿನಲ್ಲಿ ವಾಸಿಸುತ್ತಿರುತ್ತಾರೆ ಎಂದರೆ ಸರಿ. ನಿಪಿ-3 ಆರೋಪಿಗೆ ಜಾರಿಯಾಗಿರುವುದಿಲ್ಲ ಎಂದರೆ ಆರೋಪಿಯ ತಂದೆ ಸ್ವೀಕರಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನನ್ನ ದೂರಿನಲ್ಲಿ ಹೇಳಿರುವುದಿಲ್ಲ.

2013 ರಲ್ಲಿ ಕೆನರಾ ಬ್ಯಾಂಕ್, ಪಾಲನಜೋಗಹಳ್ಳಿ ಶಾಖೆಯಲ್ಲಿ ಆರೋಪಿಯು ಖಾತೆಯನ್ನು ಬಂದು ಮಾಡಿರುತ್ತಾರೆ. ಸದರಿ ಖಾತೆಗೆ ಸಂಬಂಧಿಸಿದ ಚೆಕ್ಕುಗಳನ್ನು ಆರೋಪಿಯು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ10.01.2018 ರಂದು ನಿಪಿ-1 ನ್ನು ಜಮಾ ಮಾಡಲು ನೀಡಿರುತ್ತೇನೆ. ಯಾವ ದಿನಾಂಕದಂದು ದೂರನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಗೊತ್ತಿಲ್ಲ. ಪಿರ್ಯಾದಿಯನ್ನು ಹಾಕುವ ಕಾಲಾವಧಿ ಮುಗಿದ 58 ದಿನಗಳ ನಂತರ ಹಾಕಿರುವುದಕ್ಕೆ ನ್ಯಾಯಾಲಯವು ವಿಳಂಬವನ್ನು ಕುರಿತು ವಿಚಾರಣೆಗೆ ಪ್ರಕರಣವನ್ನು ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಆರೋಪಿ ಮತ್ತು ನನ್ನ ನಡುವೆ ಹಣಕಾಸಿನ ವ್ಯವಹಾರವನ್ನು ಹೊರತುಪಡಿಸಿ ಬೇರೆ ಯಾವುದೇ ರೀತಿಯ ವ್ಯವಹಾರಗಳು ಇರುವುದಿಲ್ಲ. ಆರೋಪಿಯು ನನ್ನ ವಿರುದ್ಧ ದೊಡ್ಡಬಳ್ಳಾಪುರ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಒಂದು ದೂರನ್ನು ಹೂಡಿದ್ದು, ಅದರ ದ್ವೇಷಕ್ಕೆಪ್ರಸ್ತುತ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಯಾರೇ ಕೇಳಿದರೂ ಆರೋಪಿಗೆ ನೀಡಿದ ಹಾಗೆ ನಗದು ರೂಪದಲ್ಲಿ ಕೇಳಿದ ದಿನವೇ ಹಣವನ್ನು ನೀಡುತ್ತೇನೆ ಎಂದರೆ ಪರಿಚಯಸ್ಥರಿಗೆ ನೀಡುತ್ತೇನೆ ಎಂದು ನುಡಿಯುತ್ತಾರೆ. ನಾನು ಬಡ್ಡಿ ವ್ಯವಹಾರವನ್ನು ಮಾಡುತ್ತಿದ್ದು, ಆರೋಪಿಯು ನನ್ನ ಬಳಿ ರೂ. 1 ಲಕ್ಷ ಹಣವನ್ನು ಸಾಲವನ್ನಾಗಿ ಪಡೆದು ಅದರ ಬಾಬತ್ತು ರೂ. 75 ಸಾವಿರ ಹಣವನ್ನು ಹಿಂದಿರುಗಿಸಿ ಬಾಕಿ ಉಳಿದ ರೂ. 30 ಸಾವಿರ ಹಣವನ್ನು ಕೊಡಬೇಕಾಗಿದ್ದು, ನಾನು ರೂ. 30 ಸಾವಿರ ಹಣವನ್ನು ರೂ. 3 ಲಕ್ಷ ಹಣವನ್ನು ಕೊಡಬೇಕು ಎಂದು ಸುಳ್ಳು ಪ್ರಕರಣವನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಹಣವನ್ನು ನೀಡಿದ ದಿನವೇ ಭದ್ರತೆಗಾಗಿ ಚೆಕ್ಕನ್ನು ಪಡೆಯುವಲ್ಲಿ ಯಾವುದೇ ತೊಂದರೆ ಇರಲಿಲ್ಲ ಎಂದರೆ ಅವಶ್ಯಕತೆ ಇರಲಿಲ್ಲ ಹಾಗಾಗಿ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

ಯಾವ ಕಾರಣಕ್ಕಾಗಿ ನಿಪಿ-1 ಅಮಾನತ್ತುಗೊಂಡಿರುತ್ತದೆ ಎಂದರೆ ಸಾಕ್ಷಿಯು ಸಾಕಷ್ಟು ಹಣವಿಲ್ಲವೆಂದು ಬಂದಿರುತ್ತದೆ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-2 ರ ಪ್ರಕಾರ ನಿಪಿ-1 ಅಮಾನ್ಯಗೊಂಡಿರುವ ಕಾರಣ Account Blocked situation covered in 2125 ಎಂದು

ನಮೂದಾಗಿರುತ್ತದೆ, ಸಾಕಷ್ಟು ಹಣ ಇಲ್ಲದೇ ಇರುವ ಕಾರಣದಿಂದ ಅಮಾನ್ಯಗೊಂಡಿರುವುದಿಲ್ಲ ಎಂದರೆ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನಗೂ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿಲ್ಲ, ಅವರು ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ ಹಾಗೂ 2016 ರಲ್ಲಿ ಆರೋಪಿಯು ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ ಕಾರಣ 2016 ಕ್ಕೂ ಮೊದಲೇ ಬ್ಯಾಂಕಿನ ಖಾತೆಯನ್ನು ರದ್ದು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಓದಲು ಬರೆಯಲು ಬರುವುದಿಲ್ಲ ಹಾಗೂ ಆಂಗ್ಲ ಭಾಷಯಲ್ಲಿ ಸಹಿ ಮಾಡಲೂ ಸಹ ಬರುವುದಿಲ್ಲ ಹಾಗಾಗಿ ನಿಪಿ-1 ನ್ನು ನಾನೇ ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ನನಗೂ ವೈರತ್ವವಿರುವ ಕಾರಣದಿಂದ ಹಾಗೂ ನನ್ನ ಮತ್ತು ಜಮೀನಿನ ವ್ಯಾಜ್ಯ ಇರುವ ಕಾರಣದಿಂದ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನಿಪಿ-1 ನ್ನು ಪಡೆದು ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**